
ಮನೆಗಳವರೆಲ್ಲಾ ಅದ್ಭುತ ಶಾಂತಿಯನ್ನು, ಸೌಂದರ್ಯವನ್ನೂ ಕೋರಿ ಅವನಿಂದ ವಿಶೇಷ, ಹುಚ್ಚಾಪಟ್ಟೆ ವಿನ್ಯಾಸದ ಮನೆಗಳನ್ನು ಅಪೇಕ್ಷಿಸತೊಡಗಿದರು. ಬದುಕಿನಲ್ಲಿ ಎಲ್ಲವನ್ನೂ ಅವನ ಒಂದು ವಿನ್ಯಾಸ ಬದಲಿಸಬಹುದು ಅಂತ ಅವರೆಲ್ಲರಿಗೂ ನಂಬಿಕೆ ಬರುತ್ತಿತ್ತು. ಹಾಗಾಗಿ ಮೋಹನ ತನ್ನ ಬಾಡಿಗೆ ಮನೆಯ ಜಾಗವನ್ನೇ ಹಣ ಕೊಟ್ಟು ಕೊಂಡುಕೊಂಡು, ಅದನ್ನೇ ಆಫೀಸ್ ಸ್ಪೇಸ್ ಮಾಡಿಕೊಂಡು ಬಿಡುವಿಲ್ಲದ ಕೆಲಸದಲ್ಲಿ ತೊಡಗುವುದಕ್ಕೆ ಕಾರಣವಾಯಿತು. ಅವನಿಗೇ ಅವನ ರಾಕ್ಷಸ ಮನೆಗಳ ರಹಸ್ಯಗಳು ಅರಿವಾಗದೇ ಅಂಥ ಆಳೆತ್ತರದ ವಿನ್ಯಾಸಗಳಿಗೆ ತನ್ನನ್ನು ತಾನು ಕೊಟ್ಟುಕೊಂಡುಬಿಟ್ಟಿದ್ದ. ಕೈತುಂಬ ಹಣ, ರಾತ್ರಿಯೆಲ್ಲಾ ಅರ್ಥಂಬರ್ಥ ಕನಸುಗಳಲ್ಲಿ ಕಾಣುವ ಗೃಹಸ್ತೋಮಗಳೆಲ್ಲಾ ಸೇರಿ ಅವನ ವೃತ್ತಿ ಬೆಳೆಯಿತು.



ಹೀಗೇ ನಡೆಯುತ್ತಿರುವಾಗ ವತ್ಸಲಾ ಆಕಸ್ಮಿಕವಾಗಿ ಅವನನ್ನು ಭೆಟ್ಟಿ ಆಗಿದ್ದು. ಒಂದು ಮನೆಯನ್ನ ವಿನ್ಯಾಸ ಮಾಡುವುದಕ್ಕೆ, ಪ್ಲಾನ್ ಹಿಡಿದುಕೊಂಡು ನಂದಿನಿ ಲೇಔಟ್‌ಗೆ ಹೋಗಿದ್ದ. ಆ ಮನೆಯವರಲ್ಲಿ ಒಬ್ಬಾಕೆ ಹಣ್ಣು ಹಣ್ಣು ಮುದುಕಿ. ಆಕೆಯನ್ನು ನೋಡಿಕೊಳ್ಳುವುದಕ್ಕಂತ ಹೋಮ್ ನರ್ಸ್ ಆಗಿ ಕೆಲಸ ಮಾಡುತ್ತಿದ್ದವಳು ವತ್ಸಲಾ. ನೋಡಿದ ತಕ್ಷಣ ತನ್ನ ಬದುಕಿನ ಮಹತ್ವದ ತಿರುವೊಂದು ಅವಳ ಕಣ್ಣೋಟದಿಂದಲೇ ಪ್ರಾರಂಭವಾಗುತ್ತದೆ ಅನ್ನುವ ಸೂಚನೆಯನ್ನು ಕೊಟ್ಟಂತಾಯಿತು ಅವನಿಗೆ. ಅಲ್ಲೇ ಕುಳಿತು ಮೂರು ಗಂಟೆಗಳ ಕಾಲ ದೊಡ್ಡ ಮನೆಯ ಅಗಾಧ ಒಳಾಂಗಣ ಮತ್ತು ಹೊರಾಂಗಣದ ವಿನ್ಯಾಸವನ್ನು ಬರೆದು, ವಿವರಿಸಿ ಹೊರಡುವ ಹೊತ್ತಿಗೆ ಆ ಮನೆಯವರು ಇಂಪ್ರೆಸ್ ಆಗುವುದಕ್ಕಿಂತ ಹೆಚ್ಚಿಗೆ ಅವನಿಗೆ ಇಂಪ್ರೆಸ್ ಆಗಿಬಿಟ್ಟಿದ್ದವಳು ವತ್ಸಲಾ. ಹೊರಡುವ ಹೊತ್ತಿಗೆ ಅವನು ವಿನ್ಯಾಸ ಮಾಡುವ ಮನೆಯಲ್ಲಿ ಆ ಮುದುಕಿಯನ್ನು ಯಾವ ಕೋಣೆಯಲ್ಲಿ ಇಡಬಹುದು ಅಂತ ಪ್ರಶ್ನೆಯಲ್ಲದ ಪ್ರಶ್ನೆಯೊಂದನ್ನು ಆ ಮನೆಯ ಯಜಮಾನರ ಕಡೆಯ ಮಗ ಕೇಳಿದಾಗ ಮೋಹನನ ಕಡೆ ಮುಗುಳು ನಗೆ ನಕ್ಕ ವತ್ಸಲಾ, ಅವನ ಪ್ರೀತಿಯ ಗಾಳವನ್ನು ತನಗೆ ತಾನೇ ಕಚ್ಚಿಕೊಂಡಳು.

ಅಲ್ಲಿಂದ ತುಂಬ ಸಿನಿಮೀಯವಾಗಿ ಅವರಿಬ್ಬರ ಭೇಟಿ ಪ್ರಾರಂಭವಾಯಿತೆನ್ನಬಹುದು. ನಾಲ್ಕಾರು ಸಲ ಆ ಮನೆಗೆ ಭೇಟಿ ಮಾಡಬೇಕಾದ ಪ್ರಮೇಯ ಬಂದಾಗ ಇಬ್ಬರೂ ಫೋನ್ ನಂಬರ್ ವಿನಿಮಯ ಮಾಡಿಕೊಂಡರು, ಅವಳು ರಾಜನಕುಂಟೆಯ ಪಿಜಿಯಲ್ಲಿ ವಾಸ ಮಾಡುವ, ಕಾರ್ಕಳ ಕಡೆಯ ಬಂಟರ ಹುಡುಗಿ ಅಂತ ಗೊತ್ತಾಯಿತು. ಅವನು ಅವಳನ್ನು ನಾಲ್ಕಾರು ಸಲ ನಂದಿನಿ ಲೇಔಟ್‌ನ ಐಸ್ ಕ್ರೀಂ ಪಾರ್ಲರ್‌ಗೆ ಕರೆದೊಯ್ದ. ಅವನ ಕಾರಲ್ಲಿ ಅವರಿಬ್ಬರೂ ಭೇಟಿಯಾಗುತ್ತಿದ್ದರು, ಒಂದು ದಿನ ಮನೆಯಲ್ಲಿ ಮದುವೆಯ ಪ್ರಸ್ತಾಪವನ್ನೆತ್ತಿದ ಮೋಹನ್, ಅವಳನ್ನೇ ವಿವಾಹವಾಗುವುದಾಗಿ ಘೋಷಿಸಿದ. ಮನೆಯ ಮುಂದೆ ತೆರೆದ ಕಣ್ಣಿನ ಹದ್ದಿನ ಆಕೃತಿಯನ್ನು ಕೊಟ್ಟು, ಮನೆಯ ಅದೃಷ್ಟವನ್ನೇ ಬದಲು ಮಾಡಿದ ಮಗ ಗೊತ್ತಿಲ್ಲದ ಪ್ರದೇಶದ, ತಮ್ಮದಲ್ಲದ ಸಂಪ್ರದಾಯದ ಹುಡುಗಿಯನ್ನು ಮದುವೆಯಾಗುತ್ತೇನೆಂದಾಗ ಒಪ್ಪಬೇಕೋ ಬಿಡಬೇಕೋ ಅನ್ನುವ ಸಂದಿಗ್ಧದಲ್ಲೇ ಅವರು ಒಪ್ಪಿಕೊಂಡರು. ರಾಜಾಜಿನಗರ ಕಲ್ಯಾಣ ಮಂಟಪದಲ್ಲಿ ಅವರಿಬ್ಬರೂ ಸತಿಪತಿಗಳಾದರು.

ಅನಂತರ ಎಲ್ಲಾ ದಂಪತಿಯ ಥರ ಅವರ ಬದುಕೂ ನಿರ್ಭಾವುಕವಾಗಿ ಕಣ್ತೆರೆದುಕೊಂಡಿತು. ತಾನು ಕೂಡಿಟ್ಟ ಹಣದಲ್ಲಿ ತೆಗೆದಿಟ್ಟಿದ್ದ ಸೈಟಿನಲ್ಲಿ, ಅವನದೇ ಅಸಡ್ಡಾಳ ವಿನ್ಯಾಸವಿರುವ ಮನೆಯೊಂದು ನಿರ್ಮಾಣಗೊಂಡಿತು. ಅದರಲ್ಲಿ ಒಳಗೊಂದು ರಾಕ್ಷಸನ ಕೋರೆಹಲ್ಲುಗಳುಳ್ಳ ಪ್ರಧಾನ ದ್ವಾರವಿತ್ತು, ಬಾಲ್ಕನಿಯಂತೆ ಕಾಣುವ ಒಂದು ಜಾಗವನ್ನು ಹಳೆಯ ರಾಣಿವಾಸದ ಅಟ್ಟಣಿಗೆಯಂತೆ ರೂಪಿಸಿದ್ದ, ಅವರಿಬ್ಬರ ಶಯ್ಯಾಗೃಹಕ್ಕೆ ಮಧ್ಯೆ ಒಂದು ಗ್ಲಾಸ್ ಇರುವ ಆಕಾಶ ಕಿಂಡಿ ಇತ್ತು. ಬೆಳದಿಂಗಳು ಹಾಲು ಚೆಲ್ಲಿದಾಗಲೆಲ್ಲಾ ಅವರ ಕೋಣೆ ಪ್ರಭೆಯಿಂದ ಕೂಡಿರುತ್ತಿತ್ತು. ಅಡುಗೆ ಮನೆಯ ಹೊಗೆನಳಿಕೆ ಫ್ಯಾಕ್ಟರಿಯ ಚಿಮಣಿಯಂತೆ ಹೊರಗೆ ಬಾಯ್ತೆರೆದಿತ್ತು. ಮನೆ ನೋಡಲು ಬಂದವರೆಲ್ಲಾ ಊಟದ ರುಚಿ ಹೇಗಿದೆ ಎನ್ನುವುದನ್ನೂ ಮರೆತು, ಆ ಇಡೀ ಮನೆಯನ್ನೇ ಕಣ್ಣಲ್ಲಿ, ಬಾಯಲ್ಲಿ ತಿಂದು ತೃಪ್ತಿಪಟ್ಟರು. ಆ ಮನೆಯಲ್ಲಿ ರಾಕ್ಷಸನೂ, ಏಳು ಮಲ್ಲಿಗೆ ತೂಕದ ರಾಣಿಯೂ ವಾಸ ಪ್ರಾರಂಭ ಮಾಡಿದರು.

ಎಲ್ಲವೂ ಸರಿಯಾಗಿಯೇ ಇತ್ತು. ಅವನಿಗೆ ಬರುತ್ತಿದ್ದ ಬಹಳ ಆಕರ್ಷಕ ಸಂಬಳದ ಎದುರು ತನ್ನ ಹೋಂ ನರ್ಸ್ ಕೆಲಸದ ಸಂಬಳ ಅಂಥ ಸರಿಸಾಟಿಯಾಗಿದ್ದೇನೂ ಆಗಿರಲಿಲ್ಲ. ಆದರೆ ಅವಳಿಗೆ ಮನೆಯ ಹೊರಗೆ ಕಳೆಯುವ ಆರೆಂಟು ಗಂಟೆಗಳ ಹೊತ್ತು ತುಂಬ ಅಮೂಲ್ಯವಾಗಿದ್ದವು. ವೃದ್ಧರ ಉಲ್ಬಣಗೊಂಡ ವ್ರಣದ ಮೇಲೆ ಕುಳಿತುಕೊಳ್ಳುವ ನೊಣಗಳ ಸ್ವಾತಂತ್ರ್ಯದಂತೆ ಅವಳೂ ಅಂಥವರ ವಯೋಸಹಜ ಕಾಯಿಲೆಗಳ ಸಂಪರ್ಕ, ಸಂಸರ್ಗದಲ್ಲಿ ಹೆಚ್ಚು ಸ್ವತಂತ್ರಳಾಗುತ್ತಿದ್ದಳು. ಶ್ರೀಮಂತರ ಮನೆಗಳು, ಚೂರೂ ಸದ್ದು ಮಾಡದ ಯಮಗಾತ್ರದ ಬಾಗಿಲುಗಳು, ಯಾವಾಗಲೋ ರಾತ್ರಿ ಸಂಚಾರವಾಗುವ ಜನಸಂಖ್ಯೆ, ಒಳ್ಳೆಯ ಊಟದ ವ್ಯವಸ್ಥೆ, ಕಣ್ತೆರೆದುಕೊಂಡು ಬಾಯ್ತೆರೆಯದೇ ಮಾತಾಡುವ ವಯಸ್ಸಾದವರು, ಅವರ ಜೊತೆಗೆ ಮೌನದಲ್ಲೇ ಏರ್ಪಡುವ ಬಾಂಧವ್ಯ ಇದೆಲ್ಲದರ ಸಂತೋಷ, ಮನೆಯಲ್ಲಿ ಕುಳಿತು ಮಾಡುವ ಬಟ್ಟೆ ತೊಳೆಯುವ ಅಥವಾ ಅಡುಗೆ ಮಾಡುವ ಗೃಹಕೃತ್ಯದಲ್ಲಿ ಬಹುಶಃ ಅವಳಿಗೆ ಸಿಗುತ್ತಿರಲಿಲ್ಲ. ಹಾಗಾಗಿ ಅವಳ ಹೊರಗಡೆ ದುಡಿಯುವ ಆಸೆ ಹಸಿರಾಗಿತ್ತು ಮತ್ತು ಅದನ್ನು ಮೋಹನನೂ ವಿರೋಧಿಸಲಿಲ್ಲ, ಮನೆಗೊಂದು ಮುದ್ದಾದ ಮಗು ಬರುತ್ತಲೇ ಅವಳು ತನ್ನ ಗೃಹಿಣಿತನಕ್ಕೆ ಮರಳುತ್ತಾಳೆಂದು ಬಗೆದು ಸಮ್ಮತಿಸಿದ್ದ. ಇನ್ನೇನು ತಮ್ಮಿಬ್ಬರ ನಡುವಿನ ದೇಹ ಹೊಂದಾಣಿಕೆ ಒಂದು ಕುಡಿಯನ್ನು ಚಿಗುರಿಸಲಿದೆ ಅಂತ ಬಗೆದ ಮೋಹನ. ಕ್ರಮೇಣ ಅದು ನಿರಾಶೆ ಹೊದ್ದುಕೊಳ್ಳತೊಡಗಿತ್ತು.

ವತ್ಸಲಾ ಯಾಕೋ ದಿನೇದಿನೇ ಮಂಕಾಗುತ್ತಿದ್ದಳು. ಅವಳ ಬದುಕಿನ ಸಂಭ್ರಮದ ರೋಮಾಂಚಗಳು ಮನೆ ಹೊರಗೇ ಇರುವಂತೆ ಅವಳಿಗೆ ಭಾಸವಾಗುತ್ತಿತ್ತು. ಮಾಟಗಾತಿಯ ಕೋಟೆಯನ್ನು ಪ್ರವೇಶಿಸುತ್ತಿರುವ ಪುಟ್ಟ ರಾಣಿಯಂತೆ ಆ ಮನೆಯನ್ನು ಪ್ರತಿದಿನ ಸಂಜೆ ಪ್ರವೇಶಿಸುತ್ತಿದ್ದ ವತ್ಸಲಾಗೆ ರಾತ್ರಿಯೆಲ್ಲಾ ಭೀತಿ ಕಾಡುತ್ತಿತ್ತು. ಇದನ್ನು ಯಾರ ಹತ್ತಿರ ಹೇಳಿಕೊಳ್ಳಲು ಸಾಧ್ಯ? ಅವನ ಹುಚ್ಚಾಟದ ಕಾರಣಕ್ಕಾಗಿಯೇ ಅವನನ್ನು ಇಷ್ಟಪಟ್ಟಿದ್ದು, ತನ್ನ ಮನೆಯವರನ್ನೂ ಅದಕ್ಕಾಗಿ ಒಪ್ಪಿಸಿದ್ದು, ಮೋಹನನ ಮನೆಯವರೂ, ಮೋಹನನನ್ನು ಒಪ್ಪಿಕೊಂಡ ತನ್ನನ್ನು ವಿಚಿತ್ರವಾಗಿ ನೋಡಿದರೂ ಮರುಮಾತಾಡದೇ ಸಮ್ಮತಿಸಿ ಹೋಗಿದ್ದರು. ಹಾಗಾಗಿ ಈ ಮನೆಯ ವಿನ್ಯಾಸವನ್ನು ಹೇಗಾದರೂ ಅಲ್ಲಗಳೆಯಲು ಸಾಧ್ಯ ಈಗ? ಆದರೆ ತನ್ನಿಂದ ಈ ಮನೆಯ ಭಾಗವಾಗುವುದಕ್ಕೆ ಸಾಧ್ಯವಾಗುತ್ತಿಲ್ಲ ಅಂತ ಹೇಳಿಕೊಳ್ಳುವುದಕ್ಕೆ ವತ್ಸಲಾಳಿಂದ ಸಾಧ್ಯವಾಗದೇ ಹೋದ ಸ್ಥಿತಿ ನಿರ್ಮಾಣಗೊಂಡಿತು. ಬೇಕೆಂದೇ ತಡವಾಗಿ ಮನೆಗೆ ಬರುವಳು, ತುಂಬ ಹೊತ್ತು ತೆರೆದ ಬಾಯಿಯಂಥ ವಿಶಾಲ ಬಾಲ್ಕನಿಯಲ್ಲಿ ನಿಲ್ಲುವಳು, ಆಕಾಶದೆದುರು ಬೆತ್ತಲಾದ ಶಯ್ಯಾಗೃಹವನ್ನು ರಾತ್ರಿ ಮೌನವಾಗಿ ಎಚ್ಚರಿದ್ದು ಪರಿಶೀಲಿಸುವಳು. ರಾತ್ರಿಯೆಲ್ಲಾ ಓಡಾಡುವ ಶಾಕಿನಿಯ ಗವ್ವೆನ್ನುವ ಏಕಾಂತದಂತೆ ಅವಳ ಏಕಾಂತವೂ ಆಗಿಬಿಟ್ಟಿತ್ತು.

ಮೋಹನನಿಗೂ ತನ್ನ ಮತ್ತು ವತ್ಸಲಾ ನಡುವಿನ ವಿಚಿತ್ರ ಉದಾಸೀನತೆ ಅರಿವಿಗೆ ಬಂದಿತ್ತು. ಅವಳನ್ನು ಸೇರುವಾಗ ಅವಳು ಯಾಕೋ ಬಿಗುವಾಗಿರುತ್ತಿದ್ದಳು, ಅವಳನ್ನು ನಗಿಸುವುದಕ್ಕೆ ಅವನಿಂದ ಸಾಧ್ಯವಾಗುತ್ತಿರಲಿಲ್ಲ, ಇಬ್ಬರೂ ಹೊರಗೆ ಸುತ್ತಾಡಿ ಬಂದಾಗ ಇರುತ್ತಿದ್ದ ಸಲುಗೆ ಮತ್ತು ಸ್ವಾತಂತ್ರ್ಯ ತಮ್ಮ ಅರಮನೆಯನ್ನು ಪ್ರವೇಶಿಸುತ್ತಲೇ ಮಾಯವಾಗಿಬಿಡುತ್ತಿತ್ತು. ಅಂತಃಪುರದ ಬಾಗಿಲು ಎಣ್ಣೆ ಇಲ್ಲದಂತೆ ಕಿರ್ರುಗುಡುತ್ತಿತ್ತು. ಅವನೂ ಇದನ್ನೆಲ್ಲಾ ನಿರ್ಲಕ್ಷಿಸುವ ತಂತ್ರ ಕಂಡುಕೊಂಡ. ಸದಾ ತನ್ನ ವಿನ್ಯಾಸದ ಆಸಕ್ತಿಯಲ್ಲೇ ಮುಳುಗಿರುತ್ತಿದ್ದ ಅವನು, ಅಸಿಸ್ಟೆಂಟ್ ಒಬ್ಬನನ್ನೂ ಇಟ್ಟುಕೊಳ್ಳದೇ ತಾನೇ ಲ್ಯಾಪ್‌ಟಾಪ್‌ನಲ್ಲಿ ಮನೆಗಳ ಹೊಚ್ಚಹೊಸ ವಿನ್ಯಾಸಗಳಿಗೆ ಬಲಿಯಾಗುತ್ತಿದ್ದ. ಮನೆಯ ವಿನ್ಯಾಸ ಮಾಡಿಸಿಕೊಂಡು ಹೋದವರೆಲ್ಲಾ ವಿಜಯದ ಸುದ್ದಿ ಹೊತ್ತು ತರುತ್ತಿದ್ದರು, ಮಾರುಕಟ್ಟೆಯಲ್ಲೆಲ್ಲಾ ಇವನ ವಿನ್ಯಾಸಕ್ಕೆ ವಿಪರೀತ ಬೇಡಿಕೆ ಬಂದುಬಿಟ್ಟಿದೆ ಅಂತ ಗೊತ್ತಾಗುವ ಹಾಗೆ ಅವನನ್ನು ಯಾರ್ಯಾರೋ ಹುಡುಕಿಕೊಂಡು ಬರುತ್ತಿದ್ದರು. ಅವನ ತಿಜೋರಿಯಲ್ಲಿ ಅವಳಿಗೋಸ್ಕರ ಚಿನ್ನದ ಒಡವೆ ಜಮೆಯಾದವು, ರಾಜಕುಮಾರಿ ನಗುವಂಥ ಆಭರಣವೊಂದನ್ನು ಆ ತಿಜೋರಿಯಲ್ಲಿ ಯಾರು, ಯಾವಾಗ ತಂದಿಡುವರೋ ಗೊತ್ತಿಲ್ಲವೆನ್ನುವಂತೆ ಮನೆ ಬಿಗುವಾಗಿತ್ತು.

ವತ್ಸಲಾ ಆ ಮನೆಯ ಗೋಡೆಗಳ ಮಧ್ಯೆ ತನ್ನ ಪ್ರಾಣವನ್ನು ಮಾತ್ರ ಹೂತಿಟ್ಟು ಹೊರಗೆ ಹಾರಾಡಿಕೊಂಡು ಬರುವ ಪಕ್ಷಿಯಂತೆ ಹೋಗಿಬಿಡುತ್ತಿದ್ದಳು.

***

ಅಂಥ ಹೊತ್ತಿಗೆ ಸರಿಯಾಗಿ ಅವನಿಗೇ ಬಂದ